ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ,ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ:ಸಿ3(7)ಪ್ರಾಶಿ. IERT ವೇ.ಪಾ. 17/2013–14 ದಿನಾಂಕ:11–06–2013

ಜ್ಞಾಪನಾ

ವಿಷಯ:– ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರನ್ನು (ಐ.ಇ.ಆರ್.ಟಿ) ಐ.ಇ.ಆರ್.ಟಿ ಹುದ್ದೆಯಿಂದ ರಾಜ್ಯ ವಲಯದ ಹುದ್ದೆಗೆ ಸ್ಥಳ ನಿಯಕ್ತಿಗೊಳಿಸುವ ಬಗ್ಗೆ

ಉಲ್ಲೇಖ;– 1. ನಿರ್ದೇಶಕರು (ಕಾರ್ಯಕ್ರಮ) ಸರ್ವ ಶಿಕ್ಷಣ ಅಭಿಯಾನ ಬೆಂಗಳೂರುರವರ ಪತಸಂಖ್ಯೆ:–ಸದ.ಶಿ.ಆ/ಸ.ಶಿ./ಐ.ಇ.ಆರ್.ಟಿ/ವೇ/2013–14 ದಿ;24–04–13

2. ನಿರ್ದೇಶಕರು (ಕಾರ್ಯಕ್ರಮ) ಸರ್ವ ಶಿಕ್ಷಣ ಅಭಿಯಾನ ಬೆಂಗಳೂರುರವರ ಪತ್ರ ಸಂಖ್ಯೆ:–ಸದ.ಶಿ.ಆ/ಸ.ಶಿ./ಐ.ಇ.ಆರ್.ಟಿ/ವೇ/2013–14ದಿ;04–06–13

& & &

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ ಗುರುತಿಸಿದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಐ.ಇ.ಆರ್.ಟಿ ಗಳಾಗಿ ಪೂರ್ಣ ಕಾಲಿಕವಾಗಿ ನಿಯೋಜಿಸಿಕೊಂಡು ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ವೇತನ ಪಾವತಿಸುವ ಸಂಬಂಧ ಉಲ್ಲೇಖಿತ (1) ಮತ್ತು (2) ರ ಪತ್ರದಲ್ಲಿ ತಿಳಿಸಿರುವಂತೆ 2013–14 ನೇ ಸಾಲಿಗೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ವೇತನ ನೀಡಲು ಅನುದಾನ ಮಂಜೂರು ಮಾಡಿರುವುದಿಲ್ಲ. ಇದರಿಂದಾಗಿ ಪ್ರಸ್ತುತ ರಾಜ್ಯದಲ್ಲಿ ಪ್ರತಿ ಶೈಕ್ಷಣಿಕ ಬ್ಲಾಕ್‌ಗೆ ತಲಾ ಮೂರು ಮಂದಿಯಂತೆ ಒಟ್ಟು 202 ಬ್ಲಾಕ್‌ಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು 606 ಐಇಆರ್‌ಟಿ ಗಳವರಿಗೆ ದಿ: 01.04.2013 ರಿಂದ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ವೇತನ ನೀಡಲುಸಾಧ್ಯವಿರುವುದಿಲ್ಲ ಕಾರಣ ರಾಜ್ಯ ಸರ್ಕಾರದಿಂದ ವೇತನ ನೀಡಲು ಮತ್ತು ಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸುವ ವಿಷಯವಾಗಿ ಸೂಕ್ತ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವಂತೆ ಕೋರಿ ಉಲ್ಲೇಖ–1 ಮತ್ತು 2ರಂತೆ ಪತ್ರಗಳಲ್ಲಿ ತಿಳಿಸಿರುತ್ತಾರೆ

ಸದರಿ ಐಇಆರ್‌ಟಿ ರವರು ಎರಡು ತಿಂಗಳುಗಳಿಂದ ವೇತನ ದೊರಕದಿರುವ ಮತ್ತು ಶಾಲೆಗಳಿಗೆ ವರ್ಗಾಯಿಸುವ ವಿಷಯಕ್ಕೆ ಸಂಬಂಧಿಸಿದಂತೆ, ಸೂಕ್ತ ಆಡಳಿತಾತ್ಮಕ ನಿರ್ಧಾಠ ಈವರೆಗೆ ಪ್ರಕಟವಾಗದ ಕಾರಣ ದೂರವಾಣಿ ಮೂಲಕ/ಖುದ್ದಾಗಿ ಸ್ಪಷ್ಟೀಕರಣ ಕೋರುತ್ತಿದ್ದಾರೆ. ಇವರೆಲ್ಲರೂ ಎಂಟು ವರ್ಷಗಳಿಂದ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರಾಗಿ ಕ್ರಿಯಾಶೀಲವಾಗಿ ಕರ್ತವ್ಯ ನಿರ್ವಹಿಸಿ ವಿಕಲಚೇತನ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಶ್ರಮಿಸಿರುತ್ತಾರೆ. ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಐಇಆರ್‌ಟಿ ರವರು ಆರ್‌ಸಿಐ ನಿಯಮದಂತೆ ಅಗತ್ಯ ಶೈಕ್ಷಣಿಕ ಅರ್ಹತೆಯನ್ನು ಹೊಂದಿರದ ಕಾರಣ ಸದರಿಯವರನ್ನು ಐಇಆರ್‌ಟಿ ಹುದ್ದೆಯಲ್ಲಿಯೇ ಮುಂದುವರೆಸಿದರೆ ಮುಂದಿನ ದಿನಗಳಲ್ಲಿ ಸಮಸ್ಯೆಯಾಗಬಹುದೆಂಬ. ಕಾರಣದಿಂದ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಐಇಆರ್‌ಟಿ ಗಳವರನ್ನು ಸಾಮಾನ್ಯ ವರ್ಗಾವಣೆಯ ಕೌನ್ಸಿಲಿಂಗ್‌ಗಿಂತ ಮುಂಚಿತವಾಗಿ ಸ್ಥಳ ಆಯ್ಕೆಗೆ ಅವಕಾಶ ಮಾಡಿಕೊಟ್ಟು ಶಾಲೆಗಳಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಗಳವರಿಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ಕೋರಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಸದರಿ ಐ.ಇಆರ್.ಟಿ ಗಳಿಗೆ ರಾಜ್ಯ ವಲಯದಿಂದ ವೇತನ ಪಾವತಿಸಿ ಸದರಿಯವರುಗಳನ್ನು ರಾಜ್ಯ ವಲಯದ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸ ಬೇಕಾಗಿರುವುದರಿಂದ ಆಯಾಯ ಜಿಲ್ಲೆಗೆ ಸಂಬಂದ ಪಟ್ಟ ಐ.ಇಆರ್.ಟಿ ಗಳಿಗೆ ಉಪನಿರ್ದೇಶಕರುಗಳ (ಆಡಳಿತ) ಸಾ.ಶಿ.ಇ ರವರ ಹಂತದಲ್ಲಿ ಆಯಾಯ ತಾಲ್ಲೂಕಿನಲ್ಲಿಯೇ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಚಾಲ್ತಿಯಲ್ಲಿರುವ ನಿಯಮಗಳಂತೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆಯ ಮುಂಚಿತವಾಗಿಯೇ ಸ್ಥಳ ನಿಯುಕ್ತಿಗೊಳಿಸಲು ತಿಳಿಸಿದೆ. ಹಾಗೂ ಸದರಿ ಶಿಕ್ಷಕರ ವೇತನವನ್ನು ಬಿಡುಗಡೆ ಮಾಡಲು ಹಾಗೂ ಈಗಾಗಲೇ ಬಿಡುಗಡೆಯಾಗಿರುವ ಅನುದಾನದಲ್ಲಿಯೇ ಪಾವತಿಸಲು ಸರ್ಕಾರದ ಆದೇಶವನ್ನು ಕೋರಿದೆ. ಆದೇಶ ಬಂದ ನಂತರ ತಿಳಿಸಲಾಗುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಕಳುಹಿಸುತ್ತಾ ಕ್ರಮ ಕೈಗೊಳ್ಳಲು ತಿಳಿಸಿದೆ.

ಪ್ರತಿಯನ್ನು,

1.ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಕೇಂದ್ರ ಕಛೇರಿ. ನೃಪತುಂಗ ರಸ್ತೆ. ಬೆಂಗಳೂರುರವರಿಗೆ ಮಾಹಿತಿಗಾಗಿ ಕಳುಹಿಸಿದೆ.

\\Typing3server\typing3server\D\EST3\7780-13.doc